ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು
E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ: ಪಪೂಶಿ/ಶೈಶಾ-04/ಎನ್.ಎಸ್.ಕ್ಯೂ.ಎಫ್/2016-17 ದಿನಾಂಕ:25-02-2017.

# ಸುತ್ತೋಲೆ

ವಿಷಯ:- NSQF ಯೋಜನೆಯಡಿಯಲ್ಲಿ ವೃತ್ತಿಶಿಕ್ಷಣ ಕೌಶಲ್ಯಗಳಲ್ಲಿ ಸೈದ್ಧಾಂತಿಕ(Theory), ಸಿ.ಸಿ.ಇ(CCE)ಹಾಗೂ ಪ್ರಾಯೋಗಿಕ (Practical) ಪರೀಕ್ಷೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಆ.ಸಂ.ಇಡಿ 59 ಎಂಸಿಡಿ 2016, ದಿನಾಂಕ:16-06-2016.
2) ಯೋಜನಾ ನಿರ್ದೇಶಕರ ಪತ್ರ ಸಂಖ್ಯೆ: NSQF:2/2016-17, ದಿನಾಂಕ:22-06-2016.
3) ಈ ಕಛೇರಿ ಪತ್ರ ಸಂಖ್ಯೆ: ಪಪೂಶಿ./ಶೈ.ಶಾ-04/NVEQF-01/2016-17, ದಿನಾಂಕ: 03-08-2017 .
4) ಯೋಜನಾ ನಿರ್ದೇಶಕರ ಪತ್ರ ದಿನಾಂಕ:04-02-2017.

-*-

ಉಲ್ಲೇಖ-1, 2 ಹಾಗೂ 3ರಂತೆ 2016-17ನೇ ಸಾಲಿಗೆ ವೃತ್ತಿಶಿಕ್ಷಣ ವಿಷಯಗಳಲ್ಲಿ ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಅನುಷ್ಠಾನಗೊಳಿಸಲಾಗಿದ್ದು, ಅದರಂತೆ, ವಿದ್ಯಾರ್ಥಿಗಳ ಅಪೇಕ್ಷೆಯಂತೆ ಭಾಗ-1ರಲ್ಲಿನ ಒಂದು ಭಾಷಾ ವಿಷಯದಲ್ಲಿ ವಿನಾಯಿತಿ ಪಡೆದು ವೃತ್ತಿ ಕೌಶಲ್ಯ ವಿಷಯವನ್ನು ಅಭ್ಯಾಸ ಮಾಡುತ್ತಿದ್ದಾರೆ.

ಉಲ್ಲೇಖ-04ರಂತೆ, ಸದರಿ ವಿಷಯಗಳನ್ನು ಪ್ರಥಮ ಪಿಯುಸಿ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಾಲೇಜು ಹಂತದಲ್ಲೇ 30 ಅಂಕಗಳ ಸೈದ್ಧಾಂತಿಕ(Theory) ಪರೀಕ್ಷೆಯನ್ನು ಆಯಾ ತರಗತಿಯ ಸಾಮಾನ್ಯ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ನಡೆಸಲು ತಿಳಿಸಲಾಗಿದೆ. ಇದರೊಂದಿಗೆ ಸಮಗ್ರ ನಿರಂತರ ಮೌಲ್ಯಮಾಪನವನ್ನು(C.C.E) 20 ಅಂಕಗಳಿಗೆ ಕಾಲೇಜು ಹಂತದಲ್ಲೇ ಮಾಡಿದ್ದು, ಸದರಿ ಅಂಕಗಳನ್ನು ಕ್ರೋಢೀಕರಿಸಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಬೇಕಾಗಿದೆ.

ಅದೇ ರೀತಿ, ಸದರಿ ಸೆಕ್ಟರ್‌ಗಳಲ್ಲಿ(ವಿಷಯಗಳಲ್ಲಿ) ಪ್ರಾಯೋಗಿಕ( Practical) ಪರೀಕ್ಷೆಯನ್ನು ದಿನಾಂಕ:13-02-2017ರಿಂದ ನಡೆಸಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಸಲು ತುರ್ತಾಗಿ ಈ ಸುತ್ತೋಲೆಯೊಂದಿಗಿನ ಲಗತ್ತಿಸಿರುವ ನಮೂನೆಯಲ್ಲಿ (school database & student data base) ಮಾಹಿತಿಯನ್ನು ಒದಗಿಸಬೇಕಾಗಿದೆ. ಜಿಲ್ಲಾ ಉಪನಿರ್ದೇಶಕರುಗಳು ಅವರ ಜಿಲ್ಲಾ ವ್ಯಾಪ್ತಿಯಲ್ಲಿನ ಕಾಲೇಜುಗಳಲ್ಲಿ ಪ್ರಾಯೋಗಿಕ ಪರೀಕ್ಷೆ ತೆಗೆದುಕೊಳ್ಳಲು ಬಯಸಿರುವ ವಿದ್ಯಾರ್ಥಿಗಳ ಮತ್ತು ಕಾಲೇಜುಗಳ ಮಾಹಿತಿಯನ್ನು ತರಿಸಿಕೊಂಡು ಪ್ರಾಯೋಗಿಕ ಪರೀಕ್ಷೆ ನಡೆಸಲು ವೃತ್ತಿಶಿಕ್ಷಣ ವಿಷಯದ ಸೈದ್ಧಾಂತಿಕದ 30 ಅಂಕಗಳು, ಸಿ.ಸಿ.ಇ 20 ಅಂಕಗಳು, ಪ್ರಾಯೋಗಿಕ 50 ಅಂಕಗಳು ಸೇರಿ ಒಟ್ಟಾರೆ 100 ಅಂಕಗಳ

ಪ್ರಮಾಣ ಪತ್ರವನ್ನು ಮಂಡಳಿ ಮತ್ತು ಎನ್.ಎಸ್.ಡಿ.ಸಿ. ಜಂಟಿಯಾಗಿ ನೀಡಬೇಕಾಗಿರುವುದರಿಂದ, ಈ ಎಲ್ಲಾ ಅಂಕಗಳನ್ನು ಆಯಾ ಕಾಲೇಜಿನ ಪ್ರಾಚಾರ್ಯರು ಕ್ರೋಢೀಕರಿಸಿಡಲು ಹಾಗೂ ತಮ್ಮ ಕೋರಿಕೆಯಂತೆ ಮಂಡಳಿಗೆ ಸಲ್ಲಿಸುವಂತೆ ಪ್ರಾಚಾರ್ಯರಿಗೇ ತಿಳಿಸಲು ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ-ಮುಂದಿನ ಕ್ರಮಕ್ಕಾಗಿ.
2. ಎಲ್ಲಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರ ಗಮನಕ್ಕೆ ತರಲು ಜಿಲ್ಲಾ ಉಪ ನಿರ್ದೇಶಕರ ಮೂಲಕ ಮುಂದಿನ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, 'ಇ' ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಅಂತರ್‌ಜಾಲದಲ್ಲಿ ಅಳವಡಿಸಲು-ಮುಂದಿನ ಕ್ರಮಕ್ಕಾಗಿ.
4. ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು – ಅವಗಾಹನೆಗಾಗಿ
5. ರಾಜ್ಯಯೋಜನಾ ನಿರ್ದೇಶಕರು, RMSA,ಬೆಂಗಳೂರು, ರವರಿಗೆ ಮಾಹಿತಿಗಾಗಿ.
6. ಜಂಟಿ ನಿರ್ದೇಶಕರು (ಶೈಕ್ಷಣಿಕ/ಪರೀಕ್ಷೆ) ಪ.ಪೂ.ಶಿ.ಇ, ಬೆಂಗಳೂರು- ಮಾಹಿತಿಗಾಗಿ
7. ಕಛೇರಿ ಪ್ರತಿ.